17.	ಕೋಲಾರ	300
18.	ಮೈಸೂರು	300
	ಒಟ್ಟು	2069

ಆ) ಒಟ್ಟು ವೆಚ್ಚದ ಮೊತ್ತ ರೂ. 99,79,234-64

ಇ) ಸಂಸ್ಥೆಗೆ ಸಂದಾಯವಾಗಬೇಕಾಗಿದ್ದ ಪೂರ್ತಿ ಹಣವನ್ನು ಒಪ್ಪಂದದ ಮೇರೆಗೆ ವಾಹನಗಳನ್ನು ಕೊಡುವ ಪೂರ್ವದಲ್ಲಿಯೇ ಒಪ್ಪಂದದಾರರಿಂದ ಪಡೆಯಲಾಯಿತು.

ಈ) 1880 ಅನುಸೂಚಿಗಳು ರದ್ದಾಗಿರುತ್ತವೆ.

ಗುಲ್ಬರ್ಗಾ ವಿಶ್ವವಿದ್ಯಾಲಯವನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ.

781. ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವ ಕಲ್ಯಾಣ):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಗುಲ್ಬರ್ಗಾ ವಿಶ್ವವಿದ್ಯಾಲಯವನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ ?

2) ತಿರುಪತಿಯಲ್ಲಿರುವ ವೆಂಕಟೇಶ್ವರ ವಿಶ್ವವಿದ್ಯಾಲಯವನ್ನು ವೆಂಕಟೇಶ್ವರ ದೇವರ ಹೆಸರಿನಲ್ಲಿ ನಾಮಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

3) ಹಾಗಿದ್ದಲ್ಲಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಹೆಸರನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

1) ಇಲ್ಲ

2) ಹೌದು

3) ಇಲ್ಲ

ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ಏರಿಕೆ.

53. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ದಿನ ದಿನಕ್ಕೆ ದುಬಾರಿಯಾಗಿ ಜನಸಾಮಾನ್ಯರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೆಲೆಗಳನ್ನು ಇಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–

ಅ) – ಹೌದು–

ಆ) ಆಗಿಂದಾಗ್ಗೆ ಹೋಟೆಲ್ ಮಾಲೀಕರ ಸಂಘದವರನ್ನು ಕರೆದು ಸಭೆ ಜರುಗಿಸಿ ಹೋಟೆಲುಗಳಲ್ಲಿನ ತಿಂಡಿ ಪದಾರ್ಥಗಳ ಬೆಲೆ ಇಳಿಸಲು ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಆದೇಶ ಸಂಖ್ಯೆ ಎಫ್‌ಟಿಡಿ 40 ಡಿಐಎಂ 84 ದಿನಾಂಕ: 7–7–85ರಲ್ಲಿ ಆಹಾರ ಮತ್ತು ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಹೋಟೆಲು ತಿಂಡಿಗಳ ಬೆಲೆಗಳು ಏರಿಕೆ ಮಟ್ಟದಲ್ಲಿದ್ದಾಗ ಯಾವ ರೀತಿಯಾಗಿ ಇವುಗಳನ್ನು ಇಳಿಸಲು ಕ್ರಮ ಕೈಗೊಳ್ಳಬೇಕೆಂಬುದನ್ನು ಪರಿಗಣಿಸಲಾಗುತ್ತಿದೆ. ದಿನಾಂಕ: 25–4–92 ರಂದು ಹೋಟೆಲು ಮಾಲೀಕರ ಸಂಘದೊಂದಿಗೆ ಸಭೆ ಜರುಗಿಸಿ ಹೋಟೆಲುಗಳ ತಿಂಡಿ ಪದಾರ್ಥಗಳ ಬೆಲೆ ಕಡಿಮೆಗೊಳಿಸಲು ಪ್ರಯತ್ನಿಸಲಾಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

(ಮುಖ್ಯಮಂತ್ರಿ ಅವರ ಪರವಾಗಿ):– ಭಾರತ ಸಂವಿಧಾನದ 151 (2) ನೇ ಅನುಚ್ಛೇದದ ಮೇರೆಗೆ:– ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುವುದು.

ಅ) 1) ಧನ ವಿನಿಯೋಗ ಲೆಕ್ಕಪತ್ರಗಳು,
2) ಹಣಕಾಸು ಲೆಕ್ಕಪತ್ರಗಳು ಹಾಗೂ
3) 1991ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ನಿಯಂತ್ರಕ ಹಾಗೂ ಮಹಾಲೇಖಾ ಪರೀಕ್ಷಕರವರ ವರದಿ (ನಂ. 3 ಸಿವಿಲ್)

ಆ) ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ 1990–91ನೇ ಸಾಲಿನ ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ರಾಜಸ್ವ) ಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಿಣಿಯವರು:– ಕಾಗದ ಪತ್ರಗಳನ್ನು ಮಂಡಿಸಲಾಯಿತು

4. ವರದಿಯನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ (ಅಧ್ಯಕ್ಷರು, ಹಕ್ಕು ಭಾದ್ಯತಾ ಸಮಿತಿ) ಅವರು ಹಕ್ಕು ಭಾದ್ಯತಾ ಸಮಿತಿಯ ಎರಡನೆಯ ವರದಿಯನ್ನೊಪ್ಪಿಸುವುದು.

5. ವರದಿಯ ಪರಿಶೀಲನಾ ಸೂಚನೆ

ಶ್ರೀ ಜಿ.ಎಸ್. ಶಿವನಂಜಪ್ಪ (ಅಧ್ಯಕ್ಷರು, ಹಕ್ಕು ಭಾದ್ಯತಾ ಸಮಿತಿ) ಅವರು:–

ಅ) ಹಕ್ಕು ಬಾಧ್ಯತಾ ಸಮಿತಿಯ ಎರಡನೇ ವರದಿಯನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುವುದು.

ಆ) ಹಾಗೂ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷಿಣಿಯವರೆ, ಬೆಳಗಾವಿ ಮೇಯರ್ ಸಂಭಾಜಿ ಪಾಟೀಲ್ ಎನ್ನತಕ್ಕಂಥವರನ್ನು ಮೇಯರ್ ಆಗಿ ಮೂರ್ನಾಲ್ಕು ದಿವಸಗಳಿಂದ ಇನ್ನೂ ಅವರನ್ನು ಬಂಧನದಲ್ಲಿ ಇಟ್ಟಿದ್ದಾರೆ. ಯಾವ ಕಾರಣಕ್ಕಾಗಿ ಮೇಯರ್‌ರವರನ್ನು ಬಂಧನದಲ್ಲಿ ಇಟ್ಟಿರತಕ್ಕಂಥಾದ್ದು ? ಈ ಪ್ರಶ್ನೆ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.